




# ನೀಳ ಕಾಲ್ಗಳ ಚೆಲುವೆ

ಬರೋಬ್ಬರಿ 29.37 ಅಂಗುಲ ಎತ್ತರವಿರುವ ಜಗತ್ತಿನ ಅತಿ ಪುಟ್ಟ ಮನುಷ್ಯನಾದ ಹಿ ಪಿಂಗ್ ಪಿಂಗ್, ಗಿನ್ನೆಸ್ ದಾಖಲೆಯ ನೀಳ ಕಾಲ್ಗಳ ಚೆಲುವೆ ಸ್ವೆಟಿನಾ ಪ್ಯಾಂಕ್ರೊಟೋವಸ್‌ಳ ಕಾಲಡಿ ಬಂದು ನಿಂತಿದ್ದಾನೆ, ನೋಡಿ!

ರಷ್ಯಾದ ವೊಲ್ಗೊಗಾರ್ಡನ್ನಿನ ಸ್ವೆಟಿನಾ 6 ಅಡಿ 5 ಅಂಗುಲ ಎತ್ತರವಿದ್ದಾಳೆ. ಇದರಲ್ಲಿ ಇವಳ ಕಾಲುಗಳ ಉದ್ದವೇ 4 ಅಡಿ 4 ಅಂಗುಲ! ನೀಳ ಕಾಲ್ಗಳನ್ನು ಹೊಂದಿರುವ ಕಾರಣದಿಂದ ಗಿನ್ನೆಸ್ ವಿಶ್ವ ದಾಖಲೆಯ ಪುಟಗಳಲ್ಲಿ ಈಕೆ ಸೇರಿದ್ದಾಳೆ. ಜಗತ್ತಿನಲ್ಲೇ ಅತ್ಯಂತ ಉದ್ದ ಕಾಲುಗಳುಳ್ಳ ಮಹಿಳೆ ಎಂಬ ಕೀರ್ತಿಗೆ ಭಾಜನಳಾಗಿದ್ದಾಳೆ.

ವರ್ಜಿನಿಯಾ ಕಾಮನವೆಲ್ತ್ ವಿಶ್ವವಿದ್ಯಾಲಯದ ಪರ ಬಾಸ್ಕೆಟ್‌ಬಾಲ್ ಆಡುವುದರಲ್ಲಿಯೂ ಈಕೆ ಪ್ರವೀಣೆ. ಈಕೆಯ ಶಾಲಾ ದಿನಗಳಲ್ಲಿನ ಬಾಸ್ಕೆಟ್‌ಬಾಲ್ ದಾಖಲೆಗಳು ಈವರೆಗೂ ಯಾರಿಂದಲೂ ಅಳಿಸಿ ಹಾಕಲು ಆಗಿಲ್ಲ.

ಇತ್ತೀಚೆಗೆ ಲಂಡನ್ನಿನ ಟ್ರಫಲ್ಗಾರ್ ಚೌಕದಲ್ಲಿ ಗಿನ್ನೆಸ್ ವರ್ಲ್ಡ್ ರೆಕಾರ್ಡ್‌ನ 2009ನೇ ಇಸವಿಯ ಸಂಚಿಕೆಯನ್ನು ಅನಾವರಣ ಗೊಳಿಸುವ ಸಂದರ್ಭದಲ್ಲಿ ಹಿ ಪಿಂಗ್ ಪಿಂಗ್ ಜೊತೆ ಸ್ವೆಟಿನಾ ಫೋಟೊಗ್ರಾಫರ್‌ಗಳ ಕಣ್ಣಿಗೆ ಕಂಡಿದ್ದು ಹೀಗೆ.

■ ಅನಸೂಯಾ ಎಲ್.ಬಿ.

ರಷ್ಯಾದ ವೊಲ್ಗೊಗಾರ್ಡನ್ನಿನ ಸ್ವೆಟಿನಾ 6 ಅಡಿ 5 ಅಂಗುಲ ಎತ್ತರವಿದ್ದಾಳೆ.

ಇವಳ ಕಾಲುಗಳ ಉದ್ದವೇ **4 ಅಡಿ 4 ಅಂಗುಲ!**

ನೀಳ ಕಾಲ್ಗಳನ್ನು ಹೊಂದಿರುವ ಕಾರಣದಿಂದ ಗಿನ್ನೆಸ್ ವಿಶ್ವ ದಾಖಲೆಯ ಪುಟ ಸೇರಿದ್ದಾಳೆ.